## 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ
## ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

ಸೇಶನ ಕೇಸ ನಂಃ 189/2019

ಪಿಡಬ್ಲು : 2 ಸಿಡಬ್ಲು : 10

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ಅಜಿತ ಗೌರಿಶಂಕರ ಪೋಳ |
| ತಂದೆಯ ಹೆಸರು | : ಶ್ರೀ ಗೌರಿಶಂಕರ ಪೋಳ |
| ವಯಸ್ಸು | : 43 ವರ್ಷ |
| ಉದ್ಯೋಗ | : ವ್ಯಾಪಾರ |
| ವಾಸ್ತವ್ಯ | : ನಿಪ್ಪಾಣಿ |
| ದಿನಾಂಕ | : 12-06-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

(ಸಾಕ್ಷಿಗೆ ಹಿಂದಿ ಭಾಷೆ ಹೊರತುಪಡಿಸಿ ಬೇರೆ ಯಾವುದೇ ಭಾಷೆ ತಿಳಿಯದೇ ಇರುವುದರಿಂದ ಹಿಂದಿ ಭಾಷೆಯನ್ನು ಚೆನ್ನಾಗಿ ಮಾತನಾಡಲು ಮತ್ತು ಬರೆಯಲು ಬಲ್ಲವರಾದಂತಹ ಶ್ರೀ.ಪಿ.ಎಸ್.ಪಿ ವಕೀಲರು, ಬೆಳಗಾವಿ ವಕೀಲರ ಸಂಘ ಇವರನ್ನು ಭಾಷಾಂತರಕಾರರಾಗಿ ನೇಮಕ ಮಾಡಲಾಯಿತು. ಸದರಿ ವಕೀಲರಿಗೂ ಸಹ ಪ್ರಮಾಣ ವಚನ ಬೋಧಿಸಲಾಯಿತು.)

### ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ

ಚಾಸಾಃ 11 ಗೌರಿಶಂಕರ ನನ್ನ ತಂದೆ. ಚಾಸಾಃ 12 ಸುಮನ್ ನನ್ನ ತಾಯಿ. ಚಾಸಾಃ 13 ಭಜರಂಗ ರವಾಸಾಬ ರಾಜಗಿರ, ಚಾಸಾಃ 14 ಸುನೀಲ ಕಾಂಬಳೆ, ಚಾಸಾಃ 15 ಬಿಕಾಜಿ ಟೆಂಗರೆ ನನಗೆ ಗೊತ್ತಿರುತ್ತಾರೆ ಮತ್ತು ಅವರು ನನ್ನ ಸ್ನೇಹಿತರು. ಅವರು ನನ್ನ ಹಾಗೂ ನನ್ನ ಮೃತ ಸಹೋದರನ ಸ್ನೇಹಿತರು. ನನ್ನ ಸಹೋದರ ಅರವಿಂದ ಗೌರಿಶಂಕರ ಪೋಳ ಆತ ಈಗ ಮೃತಪಟ್ಟಿರುತ್ತಾನೆ. ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ, ನನ್ನ ಇಬ್ಬರು ಮಕ್ಕಳು, ನನ್ನ ತಂದೆ ತಾಯಿ ಮತ್ತು ನನ್ನ ಮೃತ ಅಣ್ಣ ವಾಸ ಇದ್ದೇವು.

2. ದಿಃ 31.03.2019 ರಂದು ಮಧ್ಯಾಹ್ನ 12.00 ಗಂಟೆಗೆ 1 ನೇ ಆರೋಪಿ ಸತೀಶ ಶಾಹಜಿ ಪೋನ ಮಾಡಿದ್ದಾನೆ ಎಂದು ಹೇಳಿ, ಆತನನ್ನು ಭೇಟಿ ಮಾಡಿ ಬರುತ್ತೇನೆ ಎಂದು ನನ್ನ ಅಣ್ಣ ಮನೆಯಿಂದ ಮೋಟರಸೈಕಲ (ಸುಜುಕಿ ಆಕ್ಟಿವಾ) ತೆಗೆದುಕೊಂಡು ಹೋದನು. ರಾತ್ರಿಯಾದರೂ ಸಹ ಮನೆಗೆ ವಾಪಸ್ ಬರಲಿಲ್ಲ. ಬೆಳಗ್ಗೆ ಬರಬಹುದು ಎಂದು ತಿಳಿದುಕೊಂಡು ಸುಮ್ಮನಿದ್ದೇವು. ಮರುದಿನ ಬೆಳಗ್ಗೆ ನಾನು, ಚಾಸಾಃ 13, ಚಾಸಾಃ 14 ಮತ್ತು ಚಾಸಾಃ 15 ರವರನ್ನು ಭೇಟಿ ಮಾಡಿ ನಿನ್ನೆ ಮಧ್ಯಾಹ್ನದಿಂದ ನಮ್ಮ ಅಣ್ಣ ಮನೆಗೆ ಬಂದಿಲ್ಲ ಎಂದು ನಿಮಗೇನಾದರೂ ಪೋನ ಮಾಡಿದ್ದರೆ ಎಂದು ವಿಚಾರಿಸಿದ್ದು, ಅವರುಗಳು ತಮಗೆ ಪೋನ ಮಾಡಿಲ್ಲ ಎಂದು ಹೇಳಿದರು. ಅವರುಗಳಿಗೂ ಸಹ ನನ್ನ ಅಣ್ಣನ ಬಗ್ಗೆ ತಿಳಿದಿರಲಿಲ್ಲ. ನಂತರ ನಾನು ನಿಪ್ಪಾಣಿ ಬಸವೇಶ್ವರ ಚೌಕ ಪೋಲಿಸ ಠಾಣೆಗೆ ಹೋಗಿ ನನ್ನ ಅಣ್ಣ ಕಾಣೆಯಾದ ಬಗ್ಗೆ ಮಾಹಿತಿ ನೀಡಿ ಮೌಖಿಕವಾಗಿ ದೂರು ನೀಡಿದ್ದೇನು, ಪೋಲಿಸರು ಅದನ್ನು ಬರೆದುಕೊಂಡರು. ನಂತರ ನಾನು ದೂರಿನ ಮೇಲೆ ಸಹಿ ಮಾಡಿದ್ದೇನೆ. ದೂರನ್ನು, ಅದರ ಮೇಲಿರುವ ಸಾಕ್ಷಿ ಗುರುತಿಸಿದ್ದಾರೆ. ದೂರನ್ನು ಈಗಾಗಲೇ ನಿಪಿಃ1 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿಃ1 (ಬಿ) ಎಂದು ಗುರುತಿಸಲಾಯಿತು.

3. ಪೋಲಿಸರು 1 ನೇ ಆರೋಪಿ ಸತೀಶ ಶಾಹಾಜಿ ಅವರನ್ನು ಕರೆದು ವಿಚಾರಣೆ ಮಾಡಲಾಗಿ ಆತನು ತನ್ನ ಅಣ್ಣನನ್ನು ಕೊಲೆ ಮಾಡಿ ಶವವನ್ನು ಕಲ್ಲುಗಣಿಯಲ್ಲಿ ಇರಿಸಿರುವುದಾಗಿ ಒಪ್ಪಿಕೊಂಡಿದ್ದಾನೆ ಎಂದು ಪೋಲಿಸರು ಹೇಳಿದರು.

4. ದೂರು ನೀಡಿದ ಮರುದಿನ ನನ್ನ ಅಣ್ಣನ ಶವವು ನಿಪ್ಪಾಣಿ ಶಿರಪೆವಾಡಿ ರಸ್ತೆಯಲ್ಲಿರುವ ನಾಗನೂರು ಗ್ರಾಮದ ಕಲ್ಲುಗಣಿಯಲ್ಲಿ ದೊರೆತಿರುತ್ತದೆ. ಪೋಲಿಸರು ನನ್ನನ್ನು ಶವದ ದೊರೆತ ಸ್ಥಳಕ್ಕೆ ಕರೆಸಿದ್ದು ನಾನು ಅಲ್ಲಿಗೆ ಹೋಗಿ ನನ್ನ ಅಣ್ಣನ ಶವವನ್ನು ಗುರುತಿಸಿದ್ದೇನೆ. ನಂತರ ಪೋಲಿಸರು ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿದರು. ಪಂಚನಾಮೆ ಮಾಡಿ ಪೋಟೋ ತೆಗೆದು ನಂತರ ಮರಣೋತ್ತರ ಪರೀಕ್ಷೆಗಾಗಿ ನಿಪ್ಪಾಣಿಯಲ್ಲಿರುವ ಮಹಾತ್ಮಾ ಗಾಂಧಿ ಆಸ್ಪತ್ರೆಗೆ ಕಳುಹಿಸಿದರು. ಶವ ಪಂಚನಾಮೆ ಕಾಲಕ್ಕೆ ತೆಗೆಯಲಾದ ಪೋಟೋವನ್ನು ಸಾಕ್ಷಿ ಗುರುತಿಸಿ

ಅದರಲ್ಲಿ ತಮ್ಮ ಇರುವಿಕೆಯನ್ನು, ತಮ್ಮ ಅಣ್ಣನ ಶವವನ್ನು ಗಣೆಯ ನೀರಿನಿಂದ ಮೇಲತೆಗೆದ ವ್ಯಕ್ತಿಯನ್ನು ಮತ್ತು ಸಹಾಯಕ ಆರಕ್ಷಕ ಅಧೀಕ್ಷಕರನ್ನು ಗುರುತಿಸಿದ್ದಾರೆ. ಪೋಟೋವನ್ನು ನಿಪಿ:5 ಎಂದು ಗುರುತಿಸಲಾಯಿತು.

5. 1 ನೇ ಆರೋಪಿ ಹಣಕ್ಕಾಗಿ ಆತನ ಸ್ನೇಹಿತರಾದ 2 ನೇ ಆರೋಪಿ ಸೌರಭ ಮತ್ತು 3 ನೇ ಆರೋಪಿ ರವಿ ಈರಣ್ಣ ಅವರೊಂದಿಗೆ ಸೇರಿ ನನ್ನ ಅಣ್ಣನನ್ನು ಕೊಲೆ ಮಾಡಿದ್ದಾನೆ ಎಂದು ಪೋಲಿಸರು ನನಗೆ ಹೇಳಿದರು.

6. ಘಟನೆಯ ಬಗ್ಗೆ ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

**ಪಾಟೀ ಸವಾಲು: ಶ್ರೀ.ಬಿ.ಜೆ.ಜಿ ವಕೀಲರಿಂದ 3 ನೇ ಆರೋಪಿ ಪರವಾಗಿ**

ನನ್ನ ಅಣ್ಣ ಕಾಣೆಯಾದ ಬಗ್ಗೆ ದೂರು ನೀಡುವ ಸಮಯದಲ್ಲಿ ನನಗೆ ಯಾರ ಮೇಲೆಯೂ ಸಹ ಅನುಮಾನ ಇರಲಿಲ್ಲ. ಪೋಲಿಸರು ನನ್ನ ಅಣ್ಣನ ಕೊಲೆಯಾಗಿರುವ ಬಗ್ಗೆ ನನಗೆ ತಿಳಿಸಿದ ನಂತರ ನಾನು ಪುನಃ ಪೋಲಿಸರಿಗೆ ದೂರನ್ನು ನೀಡಿದ್ದೇನೆ. ನನ್ನ ಅಣ್ಣ ಕಾಣೆಯಾದ ಬಗ್ಗೆ ದಿಃ 01.04.2019 ರಂದು ಪೋಲಿಸರಿಗೆ ದೂರನ್ನು ನೀಡಿದ್ದು, ಅದೇ ದಿನ ಆರೋಪಿತರು ನನ್ನ ಅಣ್ಣನನ್ನು ಕೊಲೆ ಮಾಡಿರುವ ಬಗ್ಗೆ ಪೋಲಿಸರಿಗೆ ದೂರನ್ನು ನೀಡಿದ್ದೇನೆ.

2. ಈ ವಿಚಾರದಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಅಣ್ಣನ ಸಾವಿಗೂ ಮತ್ತು ಆರೋಪಿತರಿಗೂ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ.

3. 1 ನೇ ಆರೋಪಿ ನನ್ನ ಅಣ್ಣನಿಗೆ ಪೋನ ಮಾಡಿ ಕರೆಸಿದನು ಎಂದು, ನನ್ನ ಅಣ್ಣ ಆ ವಿಚಾರವನ್ನು ಮನೆಯಲ್ಲಿ ಹೇಳಿ ಹೊರಗೆ ಹೋದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ನನ್ನ ಅಣ್ಣನಿಗೆ ಪೋನ ಮಾಡಿ ಕರೆದಿರುವ ವಿಚಾರವನ್ನು ನನ್ನ ಅಣ್ಣ ಸ್ವತಃ ನನಗೆ ಹೇಳಿ ಹೋಗಿದ್ದಾನೆ.

**ನ್ಯಾಯಾಲಯದ ಮುಂಜಾನೆ ಅವಧಿ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಮಧ್ಯಾಹ್ನ ಅವಧಿಗೆ ಕಾಯ್ದಿರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ.ಬಿ.ಜಿ.ಜಿ ವಕೀಲರಿಂದ 3 ನೇ ಆರೋಪಿ ಪರವಾಗಿ**

ಮೃತ ನನ್ನ ಅಣ್ಣ 39 ವರ್ಷದವನಾಗಿದ್ದನು. ಆತನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದನು. ನನ್ನ ಅಣ್ಣ ಪಾರ್ಲೆ–ಜಿ ಬಿಸ್ಕೆಟ್ ನ ವಿತರಣೆದಾರರಾಗಿದ್ದರು ಹಾಗೂ ಫ್ಲೋರ ಮಿಲ್ ನಡೆಸುತ್ತಿದ್ದರು. 2014 ರಿಂದ ಪಾರ್ಲೆ–ಜಿ ಬಿಸ್ಕೆಟ್ ನ ವಿತರಣೆದಾರರಾಗಿದ್ದರು. ಆರೋಪಿತರು ನಮ್ಮ ಮನೆಗೆ ಬಂದು ಹೋಗುತ್ತಿರಲಿಲ್ಲ. ನನ್ನ ಅಣ್ಣ ಆರೋಪಿತರ ಮನೆಗೆ ಹೋಗಿ ಬರುತ್ತಿದ್ದ ವಿಚಾರ ನನಗೆ ಗೊತ್ತಿರುವುದಿಲ್ಲ. ನನ್ನ ಅಣ್ಣನ ಮೊಬೈಲನ್ನು ಪೋಲಿಸರು ಜಪ್ತು ಮಾಡಿದ್ದಾರೆ. ನನ್ನ ಅಣ್ಣನ ಸಾವಿಗೂ, 1 ನೇ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೋಲಿಸರ ಹೇಳಿಕೆಯ ಮೇರೆಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: 2 ನೇ ಆರೋಪಿ ಪರ ಶ್ರೀ.ಎಲ್.ಜಿ.ಎನ್ ವಕೀಲರು ಹಾಗೂ 1 ನೇ ಆರೋಪಿ ಪರ ಶ್ರೀ.ಬಿ.ಎಸ್.ಆರ್ ವಕೀಲರಿಂದ**

3 ನೇ ಆರೋಪಿ ಪರವಾಗಿ ಶ್ರೀ.ಬಿ.ಜಿ.ಜಿ ವಕೀಲರು ಮಾಡಿದ ಪಾಟೀ ಸವಾಲನ್ನು 2 ನೇ ಆರೋಪಿ ಪರ ಶ್ರೀ.ಎಲ್.ಜಿ.ಎನ್ ವಕೀಲರು ಹಾಗೂ 1 ನೇ ಆರೋಪಿ ಪರ ಶ್ರೀ.ಬಿ.ಎಸ್.ಆರ್. ವಕೀಲರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿದ್ದಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬೆಳಗಾವಿ.